**ದಿನಾಂಕಃ 22-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನನಗೆ 48 ವರ್ಷ ವಯಸ್ಸು ಆಗಿದೆ. ನಾನು 1970 ರಲ್ಲಿ ಹುಟ್ಟಿರುತ್ತೇನೆ ಎಂದರೆ ಸರಿ. ನಾನುಕೂಲಿ ಕೆಲಸ ಮಾಡುತ್ತೇನೆ. ನಾನು ಕೂಲಿ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ದುಡಿಯುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಆಂಜನೇಯ ನನ್ನ ಸ್ನೇಹಿತ. ಅಪಘಾತವಾದ ದಿನ ಕುಂದೂರಿನಿಂದ ಹೊನ್ನಾಳಿಗೆ ಬರುತ್ತಿದ್ದೇನು. ಕೆಎ 17 ಎಕ್ಸ 8003 ನೇದ್ದು ಆಂಜನೇಯನಿಗೆ ಸೇರಿದ ಮೋಟಾರ್ ಸೈಕಲ್ ಆಗಿದ್ದು ಆ ದಿನ ಆತನೇ ಬೈಕನ್ನು ಚಲಾಯಿಸುತ್ತಿದ್ದು ನಾನು ಹಿಂಬದಿ ಸವಾರನಾಗಿ ಹೋಗುತ್ತಿದ್ದೇನು. ಆಂಜನೇಯನಿಗೆ ಬೈಕು ಚಲಾಯಿಸಲು ಡಿ ಎಲ್ ಇರಲಿಲ್ಲ ಮತ್ತು ವಾಹನಕ್ಕೆ ಇನ್ಸುರನ್ಸ ಚಾಲ್ತಿಯಲ್ಲಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕುಂದೂರಿನಿಂದ ಹೊನ್ನಾಳಿಗೆ ಹೋಗುವ ಕೂಡುವ ರಸ್ತೆಯಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವಲ್ಪ ಕ್ರಾಸ್ ಮುಂದೆ ಆಗಿರುತ್ತದೆ ಎಂದು ನುಡಿಯುತ್ತಾರೆ. ರಸ್ತೆಯ ಒಳಗಡೆ ಪ್ರವೇಶ ಮಾಡುವಾಗ ಬರುವ ವಾಹನಗಳನ್ನು ನೋಡುತ್ತೇವೆ ಎಂದರೆ ಸರಿ. ಮುಂಬರುವ ವಾಹನಗಳನ್ನು ನೋಡದೇ ಚಾಲಕನು ವಾಹನವನ್ನು ಚಲಾಯಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ತೊಡೆಯ ಚಪ್ಪೆ , ಎಡಗಾಲಿನ ಹಿಮ್ಮಡಿಗೆ ಗಾಯವಾಗಿದ್ದು ಬ್ಯಾಂಡೇಜ್ ಆಗಿರುತ್ತದೆ. ಆಂಜನೇಯನಿಗೆ ಎನು ಗಾಯಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ತಿಮಲಾಪುರದಲ್ಲಿ ವಾಸವಾಗಿದ್ದು , ಆಂಜನೇಯ ಕುಂದೂರಿನಲ್ಲಿ ವಾಸವಾಗಿರುತ್ತಾನೆ. ಆಂಜನೇಯ ನನ್ನನ್ನು ಬೇಟಿಯಾದಾಗ ನಾನು ಅವನಿಗೆ ಆದ ಗಾಯಗಳನ್ನು ವಿಚಾರಿಸಿರುವುದಿಲ್ಲ. ಆ ದಿನ ನಾನೇ ವಾಹನವನ್ನು ಚಲಾಯಿಸುತ್ತಿದ್ದು ಆಂಜನೇಯ ಚಲಾಯಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಮೆಗ್ಗಾನ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಹೊನ್ನಾಳಿಯ ಶ್ರೀದೇವಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಮೆಗ್ಗಾನ ಆಸ್ಪತ್ರೆಯಲ್ಲಿ 7 ದಿವಸ ಇದ್ದೇನು. ಅಲ್ಲಿ ಇಂಜಕ್ಷನ್ ಕೊಟ್ಟು, ಗ್ಲುಕೋಸ್ ಹಾಕಿರುತ್ತಾರೆ. ಶ್ರೀದೇವಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ದಿನಾಂಕ ಹೇಳಲು ಬರುವುದಿಲ್ಲ. ದೂರನ್ನು ನಾನೇ ಕೊಟ್ಟಿರುತ್ತೇನೆ. ದಿನಾಂಕ 25.11.2021 ರಂದು ಸಂಜೆ 07.00 ಗಂಟೆಗೆ ಶ್ರೀ ದೇವಿ ಆಸ್ಪತ್ರೆಯಲ್ಲಿ ಪಿರ್ಯಾದಿ

ಕೊಟ್ಟಿರುತ್ತೇವೆ ಎಂದರೆ ನನಗೆ ನೆನಪಿಲ್ಲ ಆದರೆ ಪಿರ್ಯಾದಿಯನ್ನು ನಾನೇ ಕೊಟ್ಟಿರುತ್ತೇನೆ. ಪೋಲಿಸರಿಗೆ ನಾನು ಕೊಟ್ಟ ಹೇಳಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸಾಕ್ಷಿ ಹೇಳುವುದಕ್ಕಿಂತ ಮುಂಚೆ ಪೋಲಿಸ್ ದಾಖಲೆಗಳನ್ನು ನೋಡಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿಲ್ಲ. ಅಪಘಾತಪಡಿಸಿದ ಕಾರನ್ನು , ಕಾರಿನ ಚಾಲಕನನ್ನು ಹಾಗೂ ಅದರ ನಂಬರನ್ನು ನಾನು ನೋಡಿಲ್ಲ. ಪೋಲಿಸರು ಎರಡು ಬಾರಿ ನನ್ನನ್ನು ಠಾಣೆಗೆ ಸಹಿ ಮಾಡಲು ಕರೆದಿದ್ದರು ನಾನು ಸಹಿ ಮಾಡಿರುತ್ತೇನೆ. ಕಾರಿನ ಚಾಲಕನನ್ನು ನಾನು ಇವತ್ತಿನವರೆಗೂ ನಾನು ನೋಡಿಲ್ಲ. ಕಾರು ನನಗೆ ಅಪಘಾತಪಡಿಸಿಲ್ಲ ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶ್ರೀ ದೇವಿ ಆಸ್ಪತ್ರೆಯಲ್ಲಿ ತೋರಿಸಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೆಗ್ಗಾನ ಆಸ್ಪತ್ರೆಯಲ್ಲಿ ಎರಡು ತಿಂಗಳು ಒಳರೋಗಿಯಾಗಿ ದಾಖಲಾಗಿದ್ದು 2 ಲಕ್ಷ ರೂ.ವೈದ್ಯಕೀಯ ಖರ್ಚು ಆಗಿದ್ದು ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಶ್ರೀ ದೇವಿ ಆಸ್ಪತ್ರೆಯಲ್ಲಿ ತೋರಿಸಿಕೊಂಡ ನಂತರ ತಂಡಿ ಆಸ್ಪತ್ರೆಯಲ್ಲಿ ತೋರಿಸಿಕೊಂಡಿರುತ್ತೇನೆ. ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆ ಮತ್ತು ಶ್ರೀ ದೇವಿ ಆಸ್ಪತ್ರೆಯಲ್ಲಿ ಅಂಗನ್ಯೂನತೆ ಪ್ರಮಾಣ ಪತ್ರ ಕೊಡಿ ಎಂದು ಕೇಳಿಕೊಂಡಿಲ್ಲ. ನನಗೆ ಯಾವುದೇ ತರಹದ ಅಂಗನ್ಯೂನತ ಆಗದೇ ಇದ್ದರೂ ಸಹ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಣೇಬೆನ್ನೂರಿನ ವಾಗೀಶ ನಗರದಿಂದ ಆಟೋದಲ್ಲಿ ಬಂದಿರುತ್ತೇನೆ. ನನಗೆ ಮೂರು ಜನ ಮಕ್ಕಳು, ಎರಡು ಹೆಣ್ಣು , ಒಂದು ಗಂಡು ಎಲ್ಲರೂ ಕೂಲಿ ಕೆಲಸ ಮಾಡುತ್ತಾರೆ. ನಮಗೆ ಯಾವುದೇ ಅಪಘಾತವಾಗದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. _

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.